ಸಂಖ್ಯೆ:ಸಿಬ್ಬಂದಿ(1)271/2012-13

ಜಿಲ್ಲಾಧಿಕಾರಿಗಳ ಕಛೇರಿ ,
ಮಂಡ್ಯ ಜಿಲ್ಲೆ,
ಮಂಡ್ಯ ದಿನಾಂಕ:27.09.2016.

**-: ಅಧಿಕೃತ ಜ್ಞಾಪನ :-**

**ವಿಷಯ** :- ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇದ್ದ 90 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.

**ಉಲ್ಲೇಖ** :- ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 147 ಸೇ ಅನೇ 2014, ದಿನಾಂಕ:27.01.2015.

@@@@@@

ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇದ್ದ 90 ಗ್ರಾಮಲೆಕ್ಕಿಗರ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಬೇಕಿರುವ ಹಿನ್ನೆಲೆಯಲ್ಲಿ 1:5ರ ಅನುಪಾತದಲ್ಲಿ ದಿನಾಂಕ:06.07.2016ರಂದು ಪ್ರಚುರ ಪಡಿಸಿದ್ದ ಅಭ್ಯರ್ಥಿಗಳಲ್ಲಿ ಕೆಳಕಂಡ ಮೀಸಲು ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗದ ಕಾರಣ ಸದರಿ ಮೀಸಲಾತಿಯ ಅಭ್ಯರ್ಥಿಗಳು ಲಭ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಮೀಸಲಾತಿಯಲ್ಲಿ ಅರ್ಜಿ ಸಲ್ಲಿಸಿರುವ 1:5 ಅನುಪಾತದ ಪಟ್ಟಿಯಲ್ಲಿನ ನಂತರದ ಅಭ್ಯರ್ಥಿಗಳನ್ನು ಪರಿಗಣಿಸಬೇಕಿರುತ್ತದೆ.

ಈ ಸಂಬಂಧ ಯೋಜನಾ ನಿರಾಶ್ರಿತ ಮತ್ತು ಮಾಜಿಸೈನಿಕ ಮೀಸಲಾತಿಗೆ ಅನ್ವಯವಾಗುವಂತೆ ಮಾತ್ರ 1:10ರ ಅನುಪಾತದಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಅಂತರ ಜಾಲದಲ್ಲಿ ಪ್ರಕಟಿಸಿದೆ ಹಾಗೂ ಸದರಿ ಅಭ್ಯರ್ಥಿಗಳನ್ನು ದಿನಾಂಕ:07.10.2016ರಂದು ಮೂಲ ದಾಖಲೆಗಳ ಪರಿಶೀಲನೆಗೆ ಕರೆಯಲಾಗಿದೆ. ಅಭ್ಯರ್ಥಿಗಳು ತಪ್ಪದೇ ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಾಜರಾಗಿ ಮೂಲ ದಾಖಲೆಗಳನ್ನು ಹಾಜರುಪಡಿಸುವಂತೆಯು ಹಾಗೂ ಸದರಿ ದಿನದಂದು ಗೈರುಹಾಜರಾಗಿ ಮೂಲ ದಾಖಲೆಗಳನ್ನು ಹಾಜರುಪಡಿಸದ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

| ಕ್ರ.ಸಂ | ವರ್ಗ | ಮೀಸಲಾತಿಯನ್ವಯ ಲಭ್ಯವಿರದಿರುವ ಅಭ್ಯರ್ಥಿಗಳ/ಹುದ್ದೆಗಳು | ಹುದ್ದೆಗಳ ಸಂಖ್ಯೆ: |
|---|---|---|---|
| 1. | ಸಾಮಾನ್ಯ ವರ್ಗ | ಯೋಜನಾ ನಿರಾಶಿತ್ರರು (PDP) | 02 |
| 2. | ಪರಿಶಿಷ್ಠ ಜಾತಿ | ಮಾಜಿ ಸೈನಿಕ (Ex) | 02 |
| 3. | 2ಎ | ಮಾಜಿ ಸೈನಿಕ (EX) | 01 |
| 4. | 3ಬಿ | ಮಾಜಿ ಸೈನಿಕ (EX) | 01 |

ಅಧ್ಯಕ್ಷರು,
ಗ್ರಾಮಲೆಕ್ಕಿಗರ ಆಯ್ಕೆ ಮತ್ತು ನೇರ
ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ.